**ಓ.ಎಸ್. ನಂ. 214/2020 ಪಿ.ಡಬ್ಲೂ-1 ಹೆಸರು - ಕಮಲಮ್ಮ**

**ಸಾಕ್ಷಿಯನ್ನು ದಿನಾಂಕಃ 31.07.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಬಿ.ವೈ ವಕೀಲರಿಂದಃ**

ನಾನು 5ನೇ ತರಗತಿಯವರೆಗೆ ವ್ಯಾಸಾಂಗ ಮಾಡಿದ್ದೇನೆ. ಸರ್ವೆ ನಂ. 153/1 ರಲ್ಲಿ ಒಟ್ಟು ವಿಸ್ತೀರ್ಣ 6 ಎಕರೆ 30 ಗುಂಟೆ ಇದೆ. ದಾವಾ ಸ್ವತ್ತು ಒಟ್ಟು ವಿಸ್ತೀರ್ಣ ಕರಾಬು ಕಳೆದು 6 ಎಕರೆ 4 ಗುಂಟೆ ಇದೆ ಎಂದರೆ ಸರಿ. ದಾವಾ ಸ್ವತ್ತು ಸರ್ವೆ ನಂ. 153/1 ರಲ್ಲಿ ಮಧ್ಯದಲ್ಲಿ ಬರುತ್ತದೆ. ಉಳಿದ ಜಮೀನನ್ನು ಬೇರೆಯವರು ಮಾಡಿಕೊಂಡಿದ್ದು ಅದರಲ್ಲಿ ಪರಶಿವ ಎನ್ನುವವರು ಮಾಡಿಕೊಂಡಿದ್ದಾರೆ. ಪ್ರತಿವಾದಿಗಳು ದಾವಾ ಸ್ವತ್ತಿನ ಈಶಾನ್ಯ ದಿಕ್ಕಿನಲ್ಲಿದ್ದಾರೆ. ಎಷ್ಟು ವಿಸ್ತೀರ್ಣದಲ್ಲಿ ಎಂದು ನನಗೆ ಗೊತ್ತಿಲ್ಲ. ನಾವು ನಮ್ಮ ಪೂರ್ವಿಕರ ಜಮೀನನ್ನು ಮಾಡಿಕೊಂಡಿದ್ದು, ಪ್ರತಿವಾದಿಗಳು ಪೂರ್ವಿಕರ ಜಮೀನನ್ನೇ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿಗಳು ತಾತನಕಾಲದಿಂದಲೂ ನನಗೆ ಪರಿಚಯ ಎಂದರೆ ಸರಿ. ನನ್ನ ತಂದೆಯ ಹೆಸರು ದಾಸನೂರು ಮಾದೇಗೌಡ ಎಂದರೆ ಸರಿ. ದಾವಾ ಸ್ವತ್ತಿನ ಪೂರ್ವಕ್ಕೆ 3-4 ಜಮೀನು ಬಿಟ್ಟು ನಮ್ಮ ಮತ್ತೊಂದು ಸ್ವತ್ತು ಇದ್ದು, ಅದು 1 ಎಕರೆ 26 ಗುಂಟೆ ಇರುತ್ತದೆ. ಸದರಿ ಜಮೀನಿನಲ್ಲಿ ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ಬಾವಿ ತೆಗೆಸಿಕೊಂಡಿದ್ದೇವೆ ಎಂದರೆ ಸರಿ. ಸದರಿ ಸ್ವತ್ತಿನಲ್ಲಿ ಬಾಳೆ, ಟೋಮೆಟೋ ಬೆಳೆಯುತ್ತೇವೆ. ದಾವಾ ಸ್ವತ್ತಿಗೆ ನಾನು ಕಂದಾಯ ಪಾವತಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತೊಂದು ಜಮೀನಿಗೆ ಕಂದಾಯ ಕಟ್ಟುತ್ತಿದ್ದು, ದಾವಾ ಸ್ವತ್ತಿಗೆ ಕಂದಾಯ ಕಟ್ಟುತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ನನ್ನ ಹೆಸರಿಗೆ ಆದಾಗಿನಿಂದಲೂ ಕಂದಾಯವನ್ನು ಪ್ರತಿವರ್ಷ ಪಾವತಿಸುತ್ತಿದ್ದೇನೆ. ನನ್ನ ಹೆಸರಿಗೆ ಖಾತೆ ಯಾವ ವರ್ಷದಲ್ಲಿ ಆಯಿತು ಎಂದು ನನಗೆ ಗೊತ್ತಿಲ್ಲ. 1995-96 ರಲ್ಲಿ ನನ್ನ ಹೆಸರಿಗೆ ಖಾತೆಯಾಗಿದೆ ಎಂದರೆ ಸರಿ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಕಂದಾಯ ರಸೀದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ದಾವಾ ಜಮೀನಿನ ಪೂರ್ವಕ್ಕೆಃ ನಂಜೇಗೌಡರವರ ಮಹ ಮಹದೇವೇಗೌಡ ವ್ಯವಸಾಯ ಮಾಡಿಕೊಂಡಿದ್ದಾರೆ ಎಂದರೆ ಸರಿ. ಪಶ್ಚಿಮಕ್ಕೆಃ ಸಿದ್ದೇಗೌಡರವರ ಮಕ್ಕಳಿಂದ ಯಶೋದಮ್ಮ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿ. ಉತ್ತರಕ್ಕೆಃ ಕುಳ್ಳನಾಯಕರವರ ಜಮೀನು ಎಂದರೆ ಸರಿ. ಸದರಿ ಸ್ವತ್ತನ್ನು ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ಸದರಿ ಕುಳ್ಳನಾಯಕರವರ ಜಮೀನಿನಲ್ಲಿ ಬೋರ್ ವೆಲ್ ತೆಗೆಯಲಾಗಿದೆ ಎಂದರೆ ಸರಿ. ದಕ್ಷಿಣಕ್ಕೆಃ ಬಂಜರು ಭೂಮಿ ಎಂದರೆ ಸರಿ,

ಅದನ್ನು ರಸ್ತೆಯಾಗಿ ಉಪಯೋಗಿಸುತ್ತಿದ್ದಾರೆ ಎಂದರೆ ಸರಿ. ಸದರಿ ರಸ್ತೆ ಪೂರ್ವ-ಪಶ್ಚಿಮವಾಗಿ ಇದೆ ಎಂದರೆ ಸರಿ.

ದಾವಾ ಸ್ವತ್ತಿನ ಖಾತೆ ನನ್ನ ಹೆಸರಿಗೆಯಾಗುವ ಮೊದಲು ನಮ್ಮ ತಾತ ಜವರ ಎಂಬುವವರ ಹೆಸರಿನಲ್ಲಿತ್ತು ಎಂದರೆ ಸರಿ. ಅವರ ಕಾಲವಾದ ಸುಮಾರು ವರ್ಷಗಳ ನಂತರ ನನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿ. ದಾವಾ ಸ್ವತ್ತಿನ ಮೇಲೆ ಕೃಷಿ ಇಲಾಖೆಯಲ್ಲಿ 4 ವರ್ಷಗಳ ಹಿಂದೆ ಸಾಲ ಪಡೆದಿರುತ್ತೇನೆ.

ನನ್ನ ದರದ್ದಿನ ನಿಮಿತ್ತ 2 ನೇ ಪ್ರತಿವಾದಿಯ ಹೆಂಡತಿ ಸರೋಜಮ್ಮನವರಿಗೆ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಕ್ರಯದ ಕರಾರು ಮಾಡಿಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಕರಾರಿಗೆ ನನ್ನ ತಂದೆ ಸಾಕ್ಷಿ ಸಹಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಕರಾರನ್ನು ಮಾಡಿಕೊಡುವುದರ ಜೊತೆಗೆ ದಾವಾ ಸ್ವತ್ತಿನ ಸ್ವಾಧೀನವನ್ನು ಬಿಟ್ಟುಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ದಾವಾ ಸ್ವತ್ತು ನನ್ನ ತಾತನವರ ಹೆಸರಿನಲ್ಲಿದ್ದ ಕಾರಣ ನಾನು ಕ್ರಯ ಪತ್ರ ಮಾಡಿಕೊಡಲು ಸಾಧ್ಯವಾಗಿಲ್ಲ ಎಂದರೆ ಸರಿಯಲ್ಲ. ಇಂದಿಗೂ ಸಹ 2 ನೇ ಪ್ರತಿವಾದಿಯೇ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

**1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**